ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

ವಿಷಯ: ಜಲಾನಯನ ಅಭಿವೃದ್ಧಿ ಇಲಾಖೆಯ, ವಿಶ್ವ ಬ್ಯಾಂಕ್ ನೆರವಿನ (ಸುಜಲ-III) ಯೋಜನೆಯಡಿಯಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಿಜಯಪುರ ಇವರಿಗೆ ರೂ.36.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶಗಳ ಸಂಖ್ಯೆ:ಕೃಇ/61/ಕೃಯೋಕಾ/2019, ದಿನಾಂಕ 13.05.2019 ಮತ್ತು 06.08.2019
2. ಈ ಕಛೇರಿ ಪತ್ರ ಸಂ.WDD/KWDP-II(Sujala-III)/GPI/SADH/2018-19 ದಿನಾಂಕ:09.10.2019
3. ಉಕೃನಿ ವಿಜಯಪುರ ರವರ ಪತ್ರ ಸಂ:ಉಕೃನಿ/ಜಿಕೃತಕೇವಿ/ಸುಜಲ-3/ಅ.ಬಿ./546/2019-20 ದಿನಾಂಕ:21.10.2019

ಪೀಠಿಕೆ:-

ಉಲ್ಲೇಖ (1)ರ ಸರ್ಕಾರದ ಆದೇಶಗಳಂತೆ ಜಲಾನಯನ ಅಭಿವೃದ್ಧಿ ಇಲಾಖೆಯ ವಿಶ್ವಬ್ಯಾಂಕ್ ನೆರವಿನ KWDP-II (ಸುಜಲ-III) EAP ಯೋಜನೆಗೆ ಲೆಕ್ಕ ಶೀರ್ಷಿಕೆ:2402-00-102-0-28 (ಯೋಜನೆ) ರಡಿ 2019-20ನೇ ಸಾಲಿನಲ್ಲಿ ಮೊದಲ ಮತ್ತು ಎರಡನೆಯ ತ್ರೈಮಾಸಿಕಗಳಿಗೆ ಒಟ್ಟು ರೂ.25000.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಉಲ್ಲೇಖ (2)ರ ಈ ಕಛೇರಿ ಪತ್ರದಲ್ಲಿ ಅನುಮೋದನೆ ನೀಡಲಾದಂತೆ, ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಿಜಯಪುರ ರವರು ತರಬೇತಿ ಕೇಂದ್ರದ ಕಲಿಕಾ ವಾತಾವರಣ ಸುಧಾರಣೆಗಾಗಿ ವಿವಿಧ ಕಾರ್ಯ ಚಟುವಟಿಕೆ ಕೈಗೊಳ್ಳಲು ಸುಜಲ-III ಯೋಜನೆಯಡಿ ರೂ.36,00,000/- (ರೂ. ಮೂವತ್ತಾರು ಲಕ್ಷ ಮಾತ್ರ) ಅನುದಾನ ಬಿಡುಗಡೆ ಮಾಡುವಂತೆ ಉಲ್ಲೇಖ(3) ರ ಪತ್ರದಲ್ಲಿ ಬೇಡಿಕೆ ಸಲ್ಲಿಸಿರುತ್ತಾರೆ.

ಆದಕಾರಣ, ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಿಜಯಪುರ ಇವರಿಗೆ ತರಬೇತಿ ಕೇಂದ್ರದ ಕಲಿಕಾ ವಾತಾವರಣ ಸುಧಾರಣೆಗಾಗಿ ಸುಜಲ-III ಯೋಜನೆಯಡಿ ಉಲ್ಲೇಖ (2) ರಲ್ಲಿ ಅನುಮೋದಿತ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಕೋರಿರುವ ರೂ.36,00,000.00 (ರೂ.ಮೂವತ್ತಾರು ಲಕ್ಷ ಮಾತ್ರ) ಅನುದಾನವನ್ನು ಯೋಜನೆಯ ಘಟಕ (3) ಸಾಂಸ್ಥಿಕ ಬಲವರ್ಧನೆ ಅಡಿ B. Infrastrcture Improvements ಕಾರ್ಯಕ್ರಮದಡಿ 2019-20ನೇ ಸಾಲಿನಲ್ಲಿ ಸುಜಲ-III ಯೋಜನೆ ಲೆಕ್ಕ ಶೀರ್ಷಿಕೆ 2402-00-102-0-28 (ಯೋಜನೆ) ಉಪ ಶೀರ್ಷಿಕೆ 051 ರಡಿ ಬಿಡುಗಡೆ ಮಾಡಲು ಅನುಮೋದಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಕಛೇರಿ ಆದೇಶ ಸಂಖ್ಯೆ:ವಿ.ಬ್ಯಾಂಕ್:ಸುಜಲ-III: ಜಿ.ಕೃ.ತ.ಕೇಂ,-ವಿಜಯಪುರ:ಅ.ಬಿಡುಗಡೆ:2019-20: ದಿನಾಂಕ:17.12.2019**

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಿಜಯಪುರ ಇವರಿಗೆ ತರಬೇತಿ ಕೇಂದ್ರದ ಕಲಿಕಾ ವಾತಾವರಣ ಸುಧಾರಣೆಗಾಗಿ ವಿವಿಧ ಅನುಮೋದಿತ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು KWDP-II (ಸುಜಲ-III) EAP ಯೋಜನೆಯಡಿ ರೂ.36,00,000/- (ರೂ. ಮೂವತ್ತಾರು ಲಕ್ಷ ಮಾತ್ರ) ಅನುದಾನವನ್ನು ಯೋಜನೆಯ ಘಟಕ(3) ಸಾಂಸ್ಥಿಕ ಬಲವರ್ಧನೆ ಅಡಿ B. Infrastrcture Improvements ಕಾರ್ಯಕ್ರಮದಡಿ 2019-20ನೇ ಸಾಲಿನ ಲೆಕ್ಕ ಶೀರ್ಷಿಕೆ 2402-00-102-0-28 (ಯೋಜನೆ) ಉಪ ಶೀರ್ಷಿಕೆ 051 ರಡಿ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಿಜಯಪುರ ಕೇಂದ್ರವು ಅನುಮೋದಿತ ಕಾರ್ಯಕ್ರಮಗಳಿಗೆ ಮಾತ್ರವೇ ವಿಶ್ವ ಬ್ಯಾಂಕ್ ನಿಯಮಾನುಸಾರ ದಿನಾಂಕ: 31.12.2019 ರೊಳಗೆ ವೆಚ್ಚವನ್ನು ಭರಿಸುವುದು ಹಾಗೂ ವೆಚ್ಚ ಪಟ್ಟಿಯನ್ನು ಮತ್ತು Statement of Expenditure (SoE) ನಿಗದಿತ ದಿನಾಂಕದೊಳಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು, ಮತ್ತು ಮಾಡಿರುವ ವೆಚ್ಚಕ್ಕೆ ಅನುಗುಣವಾಗಿ ಲೆಕ್ಕಪತ್ರವನ್ನು ನಿರ್ವಹಿಸಿ ತಪಾಸಣೆಗೆ ಒದಗಿಸುವುದು. ಅನುಮೋದಿತ ಕಾರ್ಯಕ್ರಮಗಳನ್ನು ಹೊರತು ಪಡಿಸಿ ಇತರೆ ಕಾರ್ಯಕ್ರಮ ಕೈಗೊಂಡಲ್ಲಿ ಸಂಬಂಧಿಸಿದವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಯೋಜನಾ ನಿರ್ದೇಶಕರು
ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-III)
ಹಾಗೂ ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ

ಪು.ತಿ.ನೋ.

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
2. ಮುಖ್ಯ ಲೆಕ್ಕಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಇವರಿಗೆ (ದ್ವಿಪ್ರತಿಗಳಲ್ಲಿ) ಮುಂದಿನ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ವಿಜಯಪುರ
4. ಜಂಟಿ ಕೃಷಿ ನಿರ್ದೇಶಕರು (IGA), ಜ.ಅ.ಇ., ಬೆಂಗಳೂರು, ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
5. ಜಂಟಿ ಕೃಷಿ ನಿರ್ದೇಶಕರು, ವಿಜಯಪುರ ಇವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.
6. ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಿಜಯಪುರ ಇವರಿಗೆ ಸೂಕ್ತ ಕ್ರಮಕ್ಕಾಗಿ.
7. Team Leader FMTSC / FRC, Sujala-III.
8. ಕಛೇರಿ ಪ್ರತಿ / ಆದೇಶದ ಕಡತಕ್ಕೆ.